ಶ್ರೀ ಮಹದೇವ್ ಜಿ. ಬಣಕಾರ್.—ಹಳೆಯ ಮೈಸೂರು ಭಾಗದಲ್ಲಿ ಉಪಾಧ್ಯಾಯರು ಟ್ರೈನಿಂಗ್ ಪಡೆಯುವುದಕ್ಕೆ ಬಂದರೆ ಅವರಿಗೆ ಫ್ಯಾಮಿಲೀ ಅಲೋಯನ್ಸ್ 15 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಆದರೆ ಧಾರವಾಡ ಡಿವಿಜನ್ನಿನ ಉಪಾಧ್ಯಾಯರು ಟ್ರೈನಿಂಗಿಗೆ ಬಂದರೆ ಅವರಿಗೆ ಫ್ಯಾಮಿಲಿ ಅಲೋಯನ್ಸ್ 7 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದು ಡಿಸ್‌ಕ್ರಿಮಿನೇಷನ್ ಹೌದೇ ಅಲ್ಲವೇ ?

ಶ್ರೀ ಕೆ. ಎ. ಶಂಕರಗೌಡ.—ಹಾಗೇನೂ ಇಲ್ಲ ಎಲ್ಲರಿಗೂ ಒಂದೇ ರೇಟು ಅಲೋಯನ್ಸ್ ಕೊಡುತ್ತಿದ್ದಾರೆ.

Construction of a Tank in Hubli Taluk

29. Sri F. S. PATIL (Kalghatgi).—

Will the Chief Minister be pleased to state :—

(*a*) whether it has come to their notice that survey was conducted since several years for constructing a tank near Veerapura village in Hubli Taluk ;

(*b*) the year in which the survey work of the said tank was started for the first time ;

(*c*) the number of times survey in respect of the said tank was conducted till the end of 1967 ;

(*d*) the extent of irrigable land estimated at each time when survey was cenducted (Yearwise figures may please be given) ;

(*e*) whether the survey work of the said tank has been completed and the plan and estimates have been prepared ;

(*f*) the estimated cost that may be incurred for the construction of the said tank :

(*g*) whether the work of the said project would be started during the current year itself ?

A.—Sri VEERENDRA PATIL (Chief Minister).—

(*a*) Yes.

(*b*) During 1964.

(*c*) Only once.

(*d*) The Scheme has not yet been finalised.

(*e*) No.

(*f*) Does not arise in view of above.

(*g*) Does not arise in view of above.

ಶ್ರೀ ಎಫ್. ಎಸ್. ಪಾಟೀಲ್.—ಸ್ವಾಮಿ, ಹುಬ್ಬಳ್ಳಿ ತಾಲ್ಲೂಕು ವೀರಾಪುರ ಗ್ರಾಮದ ಹತ್ತಿರ ಕೆರೆಯನ್ನು ಕಟ್ಟುವುದಕ್ಕಾಗಿ ಸರ್ವೆ ಕೆಲಸ 1964 ನೇ ಇಸವಿಯಲ್ಲಿಯೇ ಪ್ರಾರಂಭವಾಗಿದೆ ಎಂದು ಹೇಳಿದ್ದೀರಿ, ಹಾಗಾದರೆ 1964 ನೇ ಇಸವಿಯಿಂದ 1968 ನೆಯ ಇಸವಿಯವರೆಗೂ ಈ ಯೋಜನೆಯ ಕೆಲಸವನ್ನು ಫೈನಲೈಜ್ ಮಾಡುವುದಕ್ಕೆ ಸರ್ಕಾರಕ್ಕೆ ಆಗಿಲ್ಲವೇ, ಇದಕ್ಕೆ ಕಾರಣವೇನು ?

†ಶ್ರೀ ವೀರೇಂದ್ರ ಪಾಟೀರ್.—ಇದು ಮೀಡಿಯಂ ಪ್ರಾಜೆಕ್ಟ್ ಇದೆ. ಇದಕ್ಕೆ ನುಮಾರು 45 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಅದಕ್ಕಾಗಿ ಇಲ್ಲಿಯವರೆಗೂ ಮೀಡಿಯಂ ಪ್ರಾಜೆಕ್ಟ್ ಕೆಲಸವನ್ನು ಹೊಸದಾಗಿ ತೆಗೆದುಕೊಳ್ಳಬೇಕಾದ್ದನ್ನು ಇನ್ನೂ ವಿಚಾರ ಮಾಡಿಲ್ಲ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಇನ್ನೂ ಫೈನಲೈಜ್ ಮಾಡಿಲ್ಲ. ಹೊಸದಾಗಿ ಎಲ್ಲಿಯವರೆಗೆ ಮೀಡಿಯಂ ಮತ್ತು ಮೇಜರ್ ಇರಿಗೇಷನ್ ಪ್ರಾಜೆಕ್ಟ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂಬುದನ್ನು ತಿಳಿಯದ ಏನಾ ಈ ತರಹ ಪ್ರಾಜೆಕ್ಟುಗಳನ್ನು ತಯಾರು ಮಾಡುವುದರಲ್ಲಿ ಏನು ರಾಭ ಇಲ್ಲ.

ಶ್ರೀ ಎಫ್. ಎಸ್. ಪಾಟೀರ್.—ನಾಲ್ಕನೆಯ ಪಂಚವಾರ್ಷಿಕಯೋಜನೆಯಲ್ಲಾದರೂ ಈ ಯೋಜನೆಯನ್ನು ಸೇರಿಸುವ ಭರವಸೆಯನ್ನು ಕೊಡುತ್ತೀರಾ?

ಶ್ರೀ ವೀರೇಂದ್ರಪಾಟೀರ್.—ಆ ವಿಚಾರದಲ್ಲಿ ಇಪ್ಪೊತ್ತು ನಾನು ಭರವಸೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಮೂರನೆಯ ಪಂಚವಾರ್ಷಿಕಯೋಜನೆಯಲ್ಲಿ ಅನೇಕ ದೊಡ್ಡ ದೊಡ್ಡ ಜರಾಶಯಗಳು ಮತ್ತು ಮೀಡಿಯಂ ಜರಾಶಯಗಳನ್ನು ಕಟ್ಟುವುದಕ್ಕೆ ಕೆಲಸವನ್ನು ಪ್ರಾರಂಭ ಮಾಡಿದೆ. ಎಷ್ಟರಮಟ್ಟಿಗೆ ಹೊಸದಾಗಿ ಆ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ನಿರ್ಧಾರಕ್ಕೆ ಬಂದಮೇರೆ ಹೊಸದಾಗಿ ಏನಾದರೂ ಅಂಥಾ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದ್ದರೆ ಆಗ ಇದನ್ನು ವಿಚಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಲಘಟಗಿ ತಾಲ್ಲೂಕಾದಲ್ಲಿ ಇದುವರೆಗೂ ಸರಕಾರ ಯಾವ ವಿಧವಾದ ನೀರಾವರಿ ಯೋಜನೆಗಳನ್ನು ಮಾಡಿಲ್ಲ. ಆದುದರಿಂದ ಸಾಧ್ಯವಾದಮಟ್ಟಿಗೆ ನಾಲ್ಕನೆ ಯೋಜನೆಯಲ್ಲಾದರೂ ಇದನ್ನು ಸೇರಿಸುತ್ತೀವೆ ಎಂದು ಸರಕಾರದ ಕಡೆಯಿಂದ ಭರವಸೆ ಕೊಡುತ್ತೀರಾ?

ಶ್ರೀ ವೀರೇಂದ್ರ ಪಾಟೀರ್.—ಇದಕ್ಕೆ ನಾನು ಆಗಲೇ ಉತ್ತರ ಹೇಳಿದೆ. ಇನ್ನೂ ನಾಲ್ಕನೆ ಯೋಜನೆ ಫೈನಲೈಜು ಆಗಿಲ್ಲ. ಅದು ಆಗುವಾಗ ಪರಿಶೀಲನೆ ಮಾಡಬೇಕಾಗುತ್ತದೆ. ಇವತ್ತೇ ಇದರ ಬಗ್ಗೆ ಹೇಳುವುದು ಕಷ್ಟ.

2-00 P.M.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಕಲಘಟಗಿಯಲ್ಲಿ ಮಾಡದೇ ಇದ್ದರೆ ಧಾರವಾಡದಲ್ಲಾದರೂ ತೆಗೆದುಕೊಳ್ಳುತ್ತೀರಾ?

(ಉತ್ತರವಿಲ್ಲ.)

Reinstatement of sales officer in Spun Silk Mills, Channapatna

30. Sri T. V. KRISHNAPPA (Channapatna).—

Will the Minister for Agriculture be pleased to state :—

(*a*) whether they are aware that a dismised sales officer has been reinstated in Spun Silk Mills, Channapatna ;

(*b*) the reason for his dismissal ;

(*c*) the service he had put in formerly ;

(*d*) the pay he was drawing formerly and the present pay ?

A.—Sri B. RACHAIAH (Minister for Agriculture).—

(*a*) No dismissed sales Officer is reinstated in its strict sense. One Sri K. V. Nanjundaiah who was in charge of the Bangalore Show Room of Erstwhile Joint Stock Company, *viz.*, Mysore Spun Silk